# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

15

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ.

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 10/4/2021

# ಹಠ ಬಿಡಿ, ಕೆಲಸಕ್ಕೆ ಹಾಜರಾಗಿ

## ಸಾರಿಗೆ ನೌಕರರಿಗೆ ಸಿಎಂ ಯಡಿಯೂರಪ್ಪ ಮನವಿ । ಸದ್ಯಕ್ಕೆ ಆರನೇ ವೇತನ ಆಯೋಗ ಜಾರಿ ಅಸಾಧ್ಯ । ಸಂಕಷ್ಟ ಪರಿಸ್ಥಿತಿ ಅರ್ಥಮಾಡಿಕೊಳ್ಳುವಂತೆ ಹಿತವಚನ



■ ವಿಕ ಸುದ್ದಿಲೋಕ ಬೆಂಗಳೂರು

ಸಾರಿಗೆ ಸಂಸ್ಥೆ ನೌಕರರಿಗೆ ಯಾವುದೇ ಕಾರಣಕ್ಕೂ 6ನೇ ವೇತನ ಆಯೋಗದ ಶಿಫಾರಸಿನ ಅನ್ವಯ ಸಂಬಳ ಪರಿಷ್ಕರಣೆ ಮಾಡಲು ಸಾಧ್ಯವಿಲ್ಲ. ನೌಕರರು ಹಠ ಬಿಟ್ಟು ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಸಿಎಂ ಬಿ.ಎಸ್.ಯಡಿಯೂರಪ್ಪ ಸೂಚಿಸಿದ್ದಾರೆ.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ''ಸದ್ಯಕ್ಕೆ ಸಂಕಷ್ಟದ ಸನ್ನಿವೇಶವಿದೆ. ಇಂತಹ ಸಂದರ್ಭದಲ್ಲಿ ಸಾರಿಗೆ ನೌಕರರಿಗೆ 6ನೇ ವೇತನ ಆಯೋಗ ಶಿಫಾರಸು ಪ್ರಕಾರ ಅನುಕೂಲ ಕಲ್ಪಿಸಲು ಆಗುವುದಿಲ್ಲ. ಯಾರದೋ ಮಾತು ಕೇಳಿಕೊಂಡು ಹಠಕ್ಕೆ ಬಿದ್ದು ಪ್ರತಿಭಟಿಸಬೇಡಿ. ನಿಮ್ಮ ಹಿತ ಕಾಯಲು ಸರಕಾರ ಬದ್ಧವಿದೆ. ಇದನ್ನು ಅರ್ಥ ಮಾಡಿಕೊಂಡು ತಕ್ಷಣವೇ ಕರ್ತವ್ಯಕ್ಕೆ ವಾಪಸಾಗುವಂತೆ ಮನವಿ ಮಾಡಿಕೊಳ್ಳುತ್ತೇನೆ,'' ಎಂದರು.




'' ದಾರಿ ತಪ್ಪಿಸುವವರ ಮಾತು ಕೇಳಿ ಮುಷ್ಕರ ನಡೆಸಿದರೆ ಕಡೆಗೆ ನೀವೇ ಬಲಿಪಶುಗಳಾಗುತ್ತೀರಿ. ಸಾರ್ವಜನಿಕರಿಗೆ ತೊಂದರೆಯುಂಟು ಮಾಡಿ ಪ್ರತಿಭಟಿಸುವುದರಲ್ಲಿ ಅರ್ಥವೇ ಇಲ್ಲ. ಈಗಾಗಲೇ ಬಸ್ ಸಂಚಾರ ಇಲ್ಲದ್ದರಿಂದ ಲಕ್ಷಾಂತರ ಜನರು ತೊಂದರೆ ಅನುಭವಿಸುತ್ತಿದ್ದಾರೆ,'' ಎಂದು ಹೇಳಿದರು. ''ಕೋವಿಡ್‌ನಿಂದಾಗಿ ಸಾರಿಗೆ ಇಲಾಖೆ ನಷ್ಟದಲ್ಲಿದೆ. ಈ ನಡುವೆಯೂ ನೌಕರರಿಗೆ ಸಂಬಳ ನೀಡಲು ಸರಕಾರದ ಬೊಕ್ಕಸದಿಂದ 2,300 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇದು ನಿಮಗೆ ಅರ್ಥವಾಗುವುದಿಲ್ಲವೆಂದರೆ ಇನ್ನೇನು ಹೇಳಲು ಸಾಧ್ಯ?,'' ಎಂದು ಪ್ರಶ್ನಿಸಿದರು.

''ಏನೇ ತೊಂದರೆಯಿದ್ದರೂ ಮಾತುಕತೆಗೆ ಬನ್ನಿ ಎಂದರೂ ನೀವು ಬರುತ್ತಿಲ್ಲ. ಇಂತಹ ಹಠಮಾರಿತನದ ಧೋರಣೆಯಿಂದ ಲಕ್ಷಾಂತರ ಜನರು ಬಸ್ ಇಲ್ಲದೆ ಪರದಾಡುತ್ತಿದ್ದಾರೆ. ಸಾರಿಗೆ ಸಂಸ್ಥೆ ನೌಕರರು ಹೀಗೆ ನಡೆದುಕೊಳ್ಳುವುದು ಸರಿಯಲ್ಲ. ಇದು ಶೋಭೆಯೂ ಅಲ್ಲ. ಬೇರೆ ರಾಜ್ಯಗಳಲ್ಲಿ ಸರಕಾರಿ ನೌಕರರಿಗೇ ಸರಿಯಾಗಿ ಸಂಬಳ ಕೊಡುತ್ತಿಲ್ಲ. ನಮ್ಮ ಸರಕಾರ ಮಾತ್ರ ನೌಕರರಿಗೆ ತೊಂದರೆಯಾಗದಂತೆ ನೋಡಿಕೊಂಡಿದೆ. ಇಷ್ಟಾದರೂ ಸಾರಿಗೆ ನೌಕರರು ಪರಿಸ್ಥಿತಿ ಅರ್ಥ ಮಾಡಿಕೊಳ್ಳುತ್ತಿಲ್ಲ. ಪರೀಕ್ಷೆ ಸಮಯ ಇರುವುದರಿಂದ ವಿದ್ಯಾರ್ಥಿಗಳಿಗೂ ಸಮಸ್ಯೆಯಾಗುತ್ತಿದೆ,'' ಎಂದು ಬೇಸರ ವ್ಯಕ್ತಪಡಿಸಿದರು.

ಸಾರಿಗೆ ಸಂಸ್ಥೆ ಸಂಘಟನೆಗಳೊಂದಿಗೆ ಸಂಧಾನ ಮಾತುಕತೆ ನಡೆಸುವ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಸಿಎಂ, ''ಮಾತುಕತೆಗೆ ಕರೆದರೂ ಅವರು ಬರುವುದಿಲ್ಲ. ಹಾಗಿರುವಾಗ ಅವರೊಂದಿಗೆ ಚರ್ಚಿಸಲು ಇನ್ನೇನಿದೆ? ಏನೇ ಸಮಸ್ಯೆಯಿದ್ದರೂ ಇತ್ಯರ್ಥ ಮಾಡಿಕೊಳ್ಳಬಹುದು. ಮೊದಲು ಕರ್ತವ್ಯಕ್ಕೆ ಹಾಜರಾಗಲಿ. ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆ ನಿವಾರಿಸಲಿ,'' ಎಂದು ಹೇಳಿದರು.

**ಕೈ ಮುಗಿದು ಪ್ರಾರ್ಥಿಸುವೆ**

''ರಾಜ್ಯ ಸರಕಾರಕ್ಕೆ ಬರುವ ಆದಾಯದಲ್ಲಿ ಶೇ.85ರಷ್ಟು ಹಣ ಸರಕಾರಿ ನೌಕರರ ಸಂಬಳ, ನಿವೃತ್ತರ ಪಿಂಚಣಿ ಇನ್ನಿತರ ಉದ್ದೇಶಕ್ಕೆ ಬಳಕೆಯಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಶೇ.15ರಷ್ಟು ವೆಚ್ಚ ಮಾಡಲಾಗುತ್ತಿದೆ. ಸಾರಿಗೆ ಇಲಾಖೆ ನಷ್ಟದಲ್ಲಿದ್ದರೂ ಒಂದು ತಿಂಗಳೂ



ಕೂಡ ವೇತನ ತಪ್ಪಿಸಿಲ್ಲ. ಹೀಗಿರುವಾಗ ನೀವು ಯಾವ ಕಾರಣಕ್ಕಾಗಿ ಪ್ರತಿಭಟಿಸುತ್ತಿದ್ದೀರಿ. ನಾನು ನಿಮ್ಮಲ್ಲಿ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ. 9 ಬೇಡಿಕೆ ಪೈಕಿ 8 ಬೇಡಿಕೆ ಈಡೇರಿಸಲಾಗಿದೆ. ಸರಕಾರಿ ನೌಕರರು ಎಂದು ಪರಿಗಣಿಸುವ ಹಾಗೂ 6ನೇ ವೇತನ ಆಯೋಗ ಜಾರಿಗೊಳಿಸುವ ಬೇಡಿಕೆ ಈಡೇರಿಸಲು ಸಾಧ್ಯವಿಲ್ಲ. ಈಗಾಗಲೇ ಈಡೇರಿಸಲಾದ ಬೇಡಿಕೆ ಪೈಕಿ ಏನಾದರೂ ವ್ಯತ್ಯಾಸವಾಗಿದ್ದರೆ ಗಮನಕ್ಕೆ ತನ್ನಿ. ಅದನ್ನು ತಕ್ಷಣ ಸರಿಪಡಿಸಲಾಗುವುದು. ನಮ್ಮ ಮಾತಿನಲ್ಲಿ ನಂಬಿಕೆ ಇಟ್ಟುಕೊಳ್ಳಿ,'' ಎಂದು ಬಿಎಸ್‌ವೈ ಮನವಿ ಮಾಡಿಕೊಂಡರು.